MYSORE LEGISLATIVE ASSEMBLY

EIGHTY-FOURTH DAY.

Friday, 13th December 1963.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Establishment of a Model Centre for Plantain Cultivation at Nanjangud.

*Q.—400. **Sri N. RACHAIAH** (Nanjangud).—

Will the Government be pleased to state :—

whether they consider the desirability of establishing a Model Centre for Plantain Cultivation at Nanjangud, just as one started at Salem by Madras Government ?

A.—**Sri H. C. BORAIAH** (Parliamentary Secretary to the Minister for Agriculture).—

Yes.

ಶ್ರೀ ಎನ್. ರಾಚಯ್ಯ.—ತಾವು ಕನ್ನಡದ ಲಸ್ಟ್ ಕಳುಹಿಸಿಲ್ಲ, ನನಗೆ ಇಂಗ್ಲೀಷ್ ಗೊತ್ತಾಗುವುದಿಲ್ಲ ; ಆದ್ದರಿಂದ ಪ್ರಶ್ನೆ ಕೇಳುವುದಕ್ಕೆ ಕಷ್ಟವಾಗಿದೆ. ರಸಬಾಳೆ ನಂಜನಗೂಡಿನಲ್ಲಿ ಬಹಳ ದಿವಸದಿಂದ ವಿಶೇಷವಾಗಿ ಬೆಳೆಯುತ್ತಿತ್ತು. ಈಗ ಮೂರು-ನಾಲ್ಕು ವಷ ದಿಂದ ಆ ಬೆಳೆ ಕಡಿಮೆ ಹೋಗಿದೆ. ಅದಕ್ಕೋಸ್ಕರ ಏನು ಮಾಡಿದ್ದೀರಿ ?

ಅಧ್ಯಕ್ಷರು.—ಉತ್ತರ ತಡವಾಗಿ ಬಂದುದರಿಂದ ಕನ್ನಡಕ್ಕೆ ತರ್ಜುಮೆ ಮಾಡಲು ಸಾಕಷ್ಟು ಸಮಯ ಸಿಕ್ಕಲಿಲ್ಲ. ಅದು ನನ್ನ ತಪ್ಪು, ಕ್ಷಮಿಸಬೇಕು. ನನ್ನ ತಪ್ಪು ಅವರ ತಪ್ಪಿನ ಮೇಲೆ ಅವಲಂಬಿತವಾಗಿದೆ.

Sri SANJEEVANATH AIKALA.—Sir, does it require 11 months for the Government to simply say "yes"?

Mr. SPEAKER.—It is not a supplementary question. The Hon'ble Member may comment on it on another occasion and not now.

Sri M. C. BASAPPA.—What action Government have taken in that direction?

ಶ್ರೀ ಎಚ್. ಸಿ. ಬೋರಯ್ಯ.—ಈಗ ಒಂದು ಯೋಜನೆಯನ್ನು ತಯಾರು ಮಾಡಿದೆ. ಅದು ಸರಕಾರದ ಮುಂದಿದೆ. ರೂ. 3,33,100 ದ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ಅದು ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಸಿ. ಬಸಪ್ಪ.—ಈ ಯೋಜನೆಯನ್ನು ನಂಜನಗೂಡಿನಲ್ಲಿ ಸ್ಥಾಪನೆ ಮಾಡುತ್ತಾರೆಯೆ ?

ಶ್ರೀ ಎಚ್. ಸಿ. ಬೋರಯ್ಯ.—ಹೌದು, ಇದನ್ನು ನಂಜನಗೂಡಿನ ಹತ್ತಿರ ಸ್ಥಾಪನೆ ಮಾಡುವ ಉದ್ದೇಶವಿದೆ.

Sri M. C. BASAPPA.—What is the exact place ?

ಶ್ರೀ ಎಚ್. ಸಿ. ಬೋರಯ್ಯ.—ನಂಜನಗೂಡು ರೈಲ್ವೆ ಸ್ಟೇಷನ್ ಪಕ್ಕದಲ್ಲಿ ಒಂದು ಎಂಟು ಎಕರೆ ಜಮೀನನ್ನು ತೆಗೆದುಕೊಂಡಿದ್ದೇವೆ. ಅದು ನರ್ವೆ ನಂಬರು 64. ಸುಮಾರು 20 ಎಕರೆ ಬೇಕಾಗುತ್ತದೆ. ಪಕ್ಕದಲ್ಲಿಯೇ ಅದನ್ನು ಅಕ್ವಯರ್ ಮಾಡಿಕೊಂಡು ರಿಸರ್ಚ್ ಇನ್‌ಸ್ಟಿಟ್ಯೂಟ್ ಸ್ಥಾಪನೆ ಮಾಡಬೇಕು ಅಂತ ಇದೆ.

ಶ್ರೀ ಟಿ. ಮಾದಯ್ಯ ಗೌಡ.—ಈ ಸ್ಕೀಮು ಏನು ಅಂತ ಹೇಳುತ್ತೀರ ?

ಶ್ರೀ ಎಚ್. ಸಿ. ಬೋರಯ್ಯ.—ಅದು ದೊಡ್ಡದಿದೆ, ಅಪ್ಪಣೆ ಮಾಡಿದರೆ ಟೇಬಲ್ ಮೇಲೆ ಇಡಲು ಸಿದ್ಧನಿದ್ದೇನೆ.

ಶ್ರೀ ಟಿ. ಮಾದಯ್ಯ ಗೌಡ.—ಅದನ್ನು ಕಾರ್ಯಗತ ಮಾಡಲಕ್ಕೆ ಎಷ್ಟು ಟೈಮು ಬೇಕಾಗುತ್ತದೆ ? ಬಹಳ ಪ್ರಖ್ಯಾತವಾದ ಮೈಸೂರಿನಲ್ಲಿಯೇ ಅತ್ಯುತ್ತಮವಾದ ರಸಬಾಳೆ ಹಣ್ಣನ್ನು ನಂಜನಗೂಡಿನಲ್ಲಿ ಬೆಳೆಯುತ್ತಾ ಇದ್ದರು ಎಂದು ನಮಗೆ ಗೊತ್ತಿದೆ. ಈ ಬಾಳೆ ಹಣ್ಣನ್ನು ಇಂಪ್ರೂವ್ ಮಾಡುವುದಕ್ಕೆ ಬೇರೆ ಕಡೆಯಿಂದ ಬೇರೆ ಬೇರೆ ಜಾತಿಯವುಗಳನ್ನು ತರಿಸಿ ಅಭಿವೃದ್ಧಿ ಮಾಡಲು ಏನು ಮಾಡಿದ್ದೀರ ಅನ್ನುವುದನ್ನು ತಿಳಸುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ತಾವು ಹೇಳಿದ ಹಾಗೆ ಇದನ್ನು ಅಭಿವೃದ್ಧಿ ಮಾಡುವುದಕ್ಕೆ ಬೇರೆ ತರಹ ಬಾಳೆ ಬೆಳೆಯನ್ನ ಅಭಿವೃದ್ಧಿಪಡಿಸುವ ಯೋಜನೆಯೂ ಇದೆ. ಬಾಳೆಹಣ್ಣಿಗೆ ತಗಲುವ ರೋ ರುಜಿನಗಳನ್ನು ತಡೆಗಟ್ಟಲು ಸಂಶೋಧನೆ ನಡೆಸುವ ಮತ್ತು ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುವ ಕಾರ್ಯಕ್ರಮವಿದೆ. ಒಟ್ಟಿನಲ್ಲಿ ಬಾಳೆಹಣ್ಣಿನ ಬೆಳೆಯ ಅಭಿವೃದ್ಧಿ ಸಾಧನೆಮಾಡುವುದು ಈ ಸಂಶೋಧನೆ ಸಂಸ್ಥೆಯ ಉದ್ದೇಶ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಈ ಬಗ್ಗೆ ಪ್ರಿಲಿಮಿನರಿ ಕೆಲಸ ನಡೆದಿದೆಯೆ ? The scheme is one thing and preliminary survey is just another. They may have a scheme but no work might have been done.

Mr. SPEAKER.—The question of doing preliminary work arises after the scheme is sanctioned.

Sri K. S. SURYANARAYANA RAO.—If the scheme is sanctioned, I am satisfied ; I do not press the second part of my question.

ಶ್ರೀ ಎಚ್. ಸಿ. ಬೋರಯ್ಯ.—ಇನ್ನೂ ಯೋಜನೆಯನ್ನು ಮಂಜೂರು ಮಾಡಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಬಾಳೆ ಹಣ್ಣಿನ ಬೆಳೆಯನ್ನು ಅಭಿವೃದ್ಧಿ ಮಾಡಬೇಕೆಂಬ ಯೋಜನೆಯನ್ನು ಹಾಕಿದ್ದು, ಯೋಚನೆ ಮಾಡಿದ್ದು ರಷ್ಯ ದೇಶದಿಂದ ಇದಕ್ಕೆ ಡಿವ್ಯಾಂಡ್ ಬಂದ ಮೇಲೊ ?

ಶ್ರೀ ಎಚ್. ಸಿ. ಬೋರಯ್ಯ.—ಅದಕ್ಕೆ ಮೊದಲೇನೇ ಈ ಒಂದು ಆಲೋಚನೆ ಸರಕಾರ ಮುಂದೆ ಇತ್ತು. ರಷ್ಯ ದೇಶದಿಂದ ಇದಕ್ಕೆ ಕೋರಿಕೆ ಬಂದ ಮೇಲೆ ಈ ಬೆಳೆಯನ್ನು ಅಭಿವೃದ್ಧಿ ಪಡಿಸಬೇಕು ಎಂಬ ತೀವ್ರ ಆಶೆ ಸರಕಾರಕ್ಕೆ ಬಂದಿತು.

ಶ್ರೀ ಸಿದ್ದಯ್ಯ ಕಾಶೀಮಠ.—ಸೇಲಮ್ಮಿನಲ್ಲಿ ಯಾವ ತರಹ ಹಣ್ಣುಗಳನ್ನು ಬೆಳೆಯುತ್ತಾರೆ ?

ಶ್ರೀ ಎಚ್. ಸಿ. ಬೋರಯ್ಯ.—ಅಲ್ಲಿನ ಹಣ್ಣಿನ ತೋಟ ಮತ್ತು ಸರಕಾರಿ ತೋಟ, ಎರಡನ್ನೂ ಸೇರಿಸಿವ್ವಾರೆ. ಒಂದು ಆರ್ಡರ್-ತಪ್ಪಿ-ನರ್ಸರಿ ಮಾಡಿಕೊಂಡಿದ್ದಾರೆ.

ಶ್ರೀ ಸಿದ್ದಯ್ಯ ಕಾಶೀಮಠ.—" It is on the model of one started in Salem in Madras State " ಎಂದು ಇದೆ.

ಶ್ರೀ ಎಚ್. ಸಿ. ಬೋರಯ್ಯ.—ಅವರು ನಾನಾತರಹ ಹಣ್ಣುಗಳನ್ನು ಬೆಳೆಯುತ್ತಿದ್ದಾರೆ. ಮಾವು, ಸಪೋಟ, ಸಾತ್‌ಕುಡಿ, ದ್ರಾಕ್ಷಿ, ಬಾಳೆ ಈ ಎಲ್ಲಾ ಹಣ್ಣುಗಳನ್ನೂ ಬೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಮತ್ತು ಸಂಶೋಧನೆ ಕೂಡ ನಡೆಸುತ್ತಿದ್ದಾರೆ.

ಶ್ರೀ ಎನ್. ರಾಚಯ್ಯ.—ಸೇಲಮ್ಮಿನಲ್ಲಿ 100 ಎಕರೆ ಫಾರಂ ಮಾಡಿದ್ದಾರೆ, ತಾವು ಆ ರೀತಿ ಏನಾದ ಸ್ಕೀಮ್ ?

ಶ್ರೀ ಎಚ್. ಸಿ. ಬೋರಯ್ಯ.—ಇಪ್ಪತ್ತಮೂರು ಎಕರೆಗಳು ಅಂತ ಹೇಳಿದ್ದೇನೆ. ತಾವು ಹೇಳಿದಷ್ಟು ವಿಸ್ತಾರವಾದ ಪ್ರದೇಶದಲ್ಲಿ ಅವರು ಬೆಳೆಯುತ್ತಾ ಇಲ್ಲ.

ಶ್ರೀಮತಿ ನುಶೀರಾಬಾಯಿ ಹೀರಾಚಂದ್ ಪಾ.—ರಫ್ತಿಗೆ ಹಣ್ಣು ಹಂಪಲುಗಳನ್ನು ಗವರ್ನ್‌ಮೆಂಟ್ ಫಾರಮ್ಸ್‌ನಿಂದ ಕಳುಹಿಸುತ್ತೀರೊ, ಪ್ರೈವೇಟಾಗಿ ಬೆಳೆಯುವವರು ಕಳುಹಿಸುತ್ತಾರೊ ?

ಶ್ರೀ ಎಚ್. ಸಿ. ಬೋರಯ್ಯ.—ನಮ್ಮಲ್ಲಿ ರಫ್ತಿಗೆ ಕಳುಹಿಸತಕ್ಕಂಥ ಯೋಜನೆ ಯಾವುದೂ ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಒಂದು ಎಕರೆ ಬೆಳೆಯಿಂದ ಈಗ ಏನು ಆದಾಯ ಬರುತ್ತದೆ, ಯೋಜನೆ ಕೈಗೊಂಡ ಮೇಲೆ ಎಷ್ಟು ಆದಾಯ ಬರುತ್ತದೆ ?

ಶ್ರೀ ಎಚ್. ಸಿ. ಬೋರಯ್ಯ.—ಆ ವಿವರ ನನ್ನಲ್ಲಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯ.—ಎಂಟು ಎಕರೆ ಅಕ್ವೈಯರ್ ಮಾಡಿಕೊಂಡಿದ್ದೀವೆ., ಆದರೆ ಈ ಸ್ಕೀಮು ಇನ್ನೂ ಸ್ಯಾಂಕ್ಷನ್ ಆಗಿಲ್ಲ ಅಂತ ಹೇಳಿದಿರಿ. ಈ ಸ್ಕೀಮನ್ನು ಸ್ಯಾಂಕ್ಷನ್ ಮಾಡದಿರುವುದಕ್ಕೆ ಕಾರಣಗಳೇನು ? ಇನ್ನೂ ಹೆಚ್ಚು ಜಮೀನುಬೇಕೆಂದೊ ?

ಶ್ರೀ ಎಚ್. ಸಿ. ಬೋರಯ್ಯ.—ಬೇರೆ ಕಡೆ ಹೇಗೆ ಮಾಡುತ್ತಾ ಇದ್ದಾರೆ ಎಂದು ನೋಡಬೇಕಾಯಿತು. ಸೇಲಮ್ಮಿನಿಂದ ಈ ಬಗ್ಗೆ ವಿವರಗಳನ್ನು ತರಿಸಿಕೊಳ್ಳಬೇಕಾಯಿತು. ಅದೂ ಅಲ್ಲದೆ ಇಂಡಿಯನ್ ಆಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನವರು ಯಾವ ರೀತಿ ಧನಸಹಾಯಮಾಡುತ್ತೀರ ಎಂದು ಅವರನ್ನು ಕೇಳಿದ್ದೇವೆ. ಅದಕ್ಕೆ ಬಹುಶಃ ಅವರು ಅಭಿಪ್ರಾಯವನ್ನು ಸೂಚಿಸಿದ ಮೇಲೆ ಮುಂದುವರಿಸುವುದಕ್ಕೆ ಯೋಜನೆಯನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಕೃಷ್ಣಶೆಟ್ಟಿ.—ಬಾಳೆಹಣ್ಣಿನ ವ್ಯವಸಾಯ ತೋಟಗಾರಿಕೆಯಲ್ಲಿ ಬರುತ್ತದೆಯೋ ಅಥವಾ ವ್ಯವಸಾಯದಲ್ಲಿ ಬರುತ್ತದೆಯೋ ?

ಶ್ರೀ ಎಚ್. ಸಿ. ಬೋರಯ್ಯ.—ಮೊದಲು ವ್ಯವಸಾಯದೊಳಗೆ ಇತ್ತು, ಈಗ ತೋಟಗಾರಿಕೆಯೊಳಗೆ ಬರುತ್ತದೆ.

ಶ್ರೀ ಎನ್. ನಂಜೇಗೌಡ.—ರನ್ಬಾಳೆ ಹಣ್ಣಿಗೆ ಬರತಕ್ಕ ಗೆಡ್ಡೆ ರೋಗ ಮುಂತಾದುವು ಬರುವುದಕ್ಕೆ ಕಾರಣವನ್ನು ಕಂಡುಹಿಡಿದಿದ್ದೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಅದನ್ನೆಲ್ಲ ಕಂಡುಹಿಡಿಯುವುದಕ್ಕಾಗಿಯೇ ಈ ಒಂದು ಕೇಂದ್ರವನ್ನು ಪ್ರಾರಂಭ ಮಾಡಬೇಕೆಂದು ಹೊರಟಿರುವುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆದಾಯ ಎಷ್ಟು ಬರುತ್ತದೆ ಎಂದು ಗೊತ್ತಿಲ್ಲದೆ ಈ ಯೋಜನೆಯನ್ನು ತಯಾರುಮಾಡಿದ್ದೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಈಗಾಗಲೇ ಹೇಳಿದ ಹಾಗೆ ಇದು ಸಂಶೋಧನಾ ಸಂಸ್ಥೆ.

Sri SANJEEVANATH AIKALA.—Does Government propose to have only a model centre, or would they have a model-*cum*-research-*cum*-production-*cum*-nursery centre ?

ಶ್ರೀ ಎಚ್. ಸಿ. ಬೋರಯ್ಯ.—" Establishment of a regional fruit research sub-station at Nanjangud," ಎಂದು ಯೋಜನೆ ಇದೆ.

ಶ್ರೀ ಜಿ. ನಾರಾಯಣ ಗೌಡ.—ಬಾಳೆ ಹಣ್ಣಿನ ಸಂಬಂಧದಲ್ಲಿ ಸಂಶೋಧನೆ ನಡೆಸತಕ್ಕ ಅಧಿಕಾರಿಗಳು ನಮ್ಮ ರಾಜ್ಯದಲ್ಲಿ ಎಷ್ಟು ಜನರಿದ್ದಾರೆ ?

ಶ್ರೀ ಎಚ್. ಸಿ. ಬೋರಯ್ಯ.—ಆ ವಿವರಗಳು ಈಗ ನನ್ನ ಮುಂದೆ ಇಲ್ಲ.

Superseding of the Hulgi Multi-purpose Co-operative Society, Munirabad.

*Q.—713. Sri C. J. MUCKANNAPPA (Sira).—

Will the Government be pleased to state :—

(*a*) whether the Hulgi Multi-purpose Co-operative Society, Munirabad, District Raichur is superseded ;

(*b*) if so, when and what was the amount involved ;

(*c*) who were the Presidents of the Society from its inception ;

(*d*) whether it is a fact that an Assistant Registrar also was on the Board of Directors from its inception ;